

## ಕರಿಯರ್ ಕೌನ್ಸೆಲಿಂಗ್

# ಮಕ್ಕಳ ಭವಿಷ್ಯಕ್ಕೊಂದು ಮಾರ್ಗಸೂಚಿ

**ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿನ ಉತ್ತಮ ಫಲಿತಾಂಶ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಸಂತಸ–ನಿರಾಳತೆ ತರುವುದರೊಂದಿಗೆ ಗೊಂದಲವನ್ನೂ ಉಂಟುಮಾಡುತ್ತದೆ. ಮುಂದೇನು? ಯಾವ ಕೋರ್ಸ್ ತೆಗೆದುಕೊಂಡರೆ ಒಳ್ಳೆಯದು? ಯಾವ ದಾರಿಯಲ್ಲಿ ನಡೆದರೆ ಯಶಸ್ಸು ಪಡೆಯಬಹುದು? ಎನ್ನುವ ಪ್ರಶ್ನೆಗಳು ಕಾಡತೊಡಗಿ ಗೊಂದಲ ಹುಟ್ಟಿಸುತ್ತವೆ. ಈ ಗೊಂದಲಕ್ಕೆ ಒಂದು ಉತ್ತರ – 'ಕರಿಯರ್ ಕೌನ್ಸೆಲಿಂಗ್'.**

■ **ಅನಿತಾ ನಾಡಿಗ್**
ಮೈಂಡ್ ಕೋಚ್ ಮತ್ತು ಕೌನ್ಸೆಲರ್

ಮಕ್ಕಳ ಪರೀಕ್ಷೆಗೆ ಸ್ವಲ್ಪ ಸಮಯಕ್ಕೆ ಮುಂಚೆ ಮತ್ತು ಹತ್ತನೇ ಹಾಗೂ ಪಿಯುಸಿ ಫಲಿತಾಂಶದ ನಂತರ ನಮ್ಮ ಕೌನ್ಸೆಲಿಂಗ್ ಸೆಂಟರ್‌ಗೆ ಪೋಷಕರ ಕರೆಗಳು ಬರುವುದು ಹೆಚ್ಚಾಗುತ್ತದೆ.

'ನನ್ನ ಮಗ ಎಸ್‌ಎಸ್‌ಎಲ್‌ಸಿ ಪಾಸು ಮಾಡುತ್ತಾನೋ ಇಲ್ಲವೋ ಅಂತ ಚಿಂತೆಯಾಗಿದೆ' ಎಂದೋ, 'ಟೆಂಥ್/ಪಿಯುಸಿ ಆದ ಮೇಲೆ ಏನು ಕೊಡಿಸಬೇಕು ಎಂದು ಗೊಂದಲವಿದೆ' ಎಂದೋ ಕರೆ ಮಾಡುವವರು ಒಂದೆಡೆಯಾದರೆ, 'ಮಗ ಚೆನ್ನಾಗಿ ಕ್ರಿಕೆಟ್ ಆಡ್ತಾನೆ. ಸ್ಪೋರ್ಟ್ಸ್ ಫೋಕಸ್ ಮಾಡುವುದೋ, ಸ್ಟಡೀಸ್ ಮೇಲೆ ಗಮನಹರಿಸಬೇಕೋ ಗೊತ್ತಾಗುತ್ತಿಲ್ಲ' ಅಂತಾನೋ, 'ನಾನು ನನ್ನ ಮಗಳಿಗೆ ಪ್ಯೂರ್ ಸೈನ್ಸ್ ಸಬ್ಜೆಕ್ಟ್ಸ್‌ಅಲ್ಲಿ ಎಂಜಿನಿಯರಿಂಗ್ ಮಾಡು ಅಂತ. ಇವಳು ಅದಕ್ಕೆ ರೆಡಿನೇ ಇಲ್ಲ. ಅದೇನೋ ಪ್ರಾಡಕ್ಟ್ ಡಿಸೈನ್ ಮೇಲೆ ಮಾಡಬೇಕು ಅಂತ ಹಟ ಹಿಡಿದು ಕೂತಿದಾಳೆ' ಎಂದು ಆತಂಕ, ಅಸಮಾಧಾನ ತೋಡಿಕೊಳ್ಳುವುದೂ ಇದೆ.

ಹತ್ತನೇ ತರಗತಿ ಹಾಗೂ ಹನ್ನೆರಡನೇ ತರಗತಿ (ಪಿಯುಸಿ) ಮಕ್ಕಳ ವಿದ್ಯಾಭ್ಯಾಸದಲ್ಲಿ ಒಂದು ಮಹತ್ವದ ತಿರುವಿನ ಹಂತ. ಇಲ್ಲಿ ಸರಿಯಾದ, ಸ್ಪಷ್ಟತೆಯಿಂದ ನಿರ್ಧಾರ ಮಾಡದಿದ್ದರೆ ಮಕ್ಕಳು ಹಾಗೂ ಪೋಷಕರು ಮುಂದೆ ಕಷ್ಟಕ್ಕೆ ಈಡಾಗಬಹುದು.

ಮಗನ ಮೇಲೆ ವಿಪರೀತ ಕೋಪಿಸಿಕೊಂಡ ಒಬ್ಬ ಪೋಷಕರು ಫೋನಾಯಿಸಿದ್ದರು. 'ನಾನು ಲಕ್ಷ ಲಕ್ಷ ತೆತ್ತು ಎಂಜಿನಿಯರಿಂಗ್‌ಗೆ